**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ಅವರು ಕೇಂದ್ರ ಸರ್ಕಾರದ "ನೌಕರರ ಭವಿಷ್ಯ ನಿಧಿ" ಖಾತೆಯನ್ನು ಹೊಂದಿರುವ ನೌಕರರ ಖಾತೆಗಳಲ್ಲಿ ಆಗುವ ವಹಿವಾಟುಗಳನ್ನು ಸಂಪರ್ಕ ಜಾಲದಲ್ಲಿ ನೋಡಲು ಅವಕಾಶವಿರುವ ರೀತಿಯಲ್ಲಿ ಕರ್ನಾಟಕ ಸರ್ಕಾರ ವಿಮಾ ಇಲಾಖೆಯಲ್ಲೂ ನೌಕರರು ತಮ್ಮ ಖಾತೆಯಲ್ಲಿ ಆಗುವ ವಹಿವಾಟುಗಳನ್ನು ಸಂಪರ್ಕ ಜಾಲದಲ್ಲಿ ನೋಡುವ ವ್ಯವಸ್ಥೆಯ ಕುರಿತು ಪ್ರಸ್ತಾಪಿಸಿರುವುದು.**

**ವಿಷಯ:**

ಕೇಂದ್ರ ಸರ್ಕಾರದ "ನೌಕರರ ಭವಿಷ್ಯ ನಿಧಿ" (Provident Fund) ಖಾತೆಯನ್ನು ಹೊಂದಿರುವ ನೌಕರರ ಖಾತೆಯಲ್ಲಿ ಆಗುವ ವಹಿವಾಟುಗಳನ್ನು ಸಂಪರ್ಕ ಜಾಲದಲ್ಲಿ (Online) ನೋಡಲು ಅವಕಾಶವಿದ್ದು, ಇದೇ ರೀತಿಯಲ್ಲಿ ಕರ್ನಾಟಕ ರಾಜ್ಯದ ಕರ್ನಾಟಕ ಸರ್ಕಾರ ವಿಮಾ ಇಲಾಖೆ (Karnataka Government Insurance Department)ಯಲ್ಲೂ ನೌಕರರು ತಮ್ಮ ಖಾತೆಯಲ್ಲಿ ಆಗುವ ವಹಿವಾಟುಗಳನ್ನು ಸಂಪರ್ಕ ಜಾಲದಲ್ಲಿ ನೋಡುವ ವ್ಯವಸ್ಥೆಯ ಕುರಿತು.

**ಉತ್ತರ:**

ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ನೌಕರರು ತಮ್ಮ ಖಾತೆಯಲ್ಲಿ ಆಗುವ ವಹಿವಾಟುಗಳನ್ನು ಸಂಪರ್ಕ ಜಾಲದಲ್ಲಿ ನೋಡುವ ವ್ಯವಸ್ಥೆಯನ್ನು ಕಲ್ಪಿಸಲು ಮೊದಲು ಕರ್ನಾಟಕ ಸರ್ಕಾರ ವಿಮಾ ಇಲಾಖೆಯು ಗಣಕೀಕರಣಗೊಳ್ಳಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಸಮಗ್ರ ಗಣಕೀಕರಣ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯಕವಾಗಿರುವ ಸಾಫ್ಟ್ ವೇರ್ ಅನ್ನು ಅಭಿವೃದ್ಧಿ ಪಡಿಸಲು ಹಾಗೂ ನಿರ್ವಹಿಸಲು ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್(CSG) ಅವರಿಗೆ ವಹಿಸಿ ಸರ್ಕಾರದ ಆದೇಶ ಸಂಖ್ಯೆ: ಆಇ 74 ಕವಿಇ 2017, ದಿನಾಂಕ:22.10.2019ರಲ್ಲಿ ಒಟ್ಟು ರೂ.237.63 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ. ಅದಲ್ಲದೆ, ಸಮ ಸಂಖ್ಯೆಯ ದಿನಾಂಕ 21.09.2020ರ ಆದೇಶದಲ್ಲಿ ವಿಮಾ ಪಾಲಿಸಿ, ಸಾಲ ಮತ್ತು ದಾಖಲಾತಿಗಳ ಡಿಜಿಟಲೈಸೇಷನ್ ಕಾಮಗಾರಿಯನ್ನೂ CSG ಅವರಿಗೆ ವಹಿಸಿ ರೂ. 54.51 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಇದರ ಪ್ರಥಮ ಹಂತವಾಗಿ ಜನ್ಮ ದಿನಾಂಕ:01.01.1965ಕ್ಕಿಂತ ಮೇಲ್ಪಟ್ಟ ಅಂದಾಜು 4.7 ಲಕ್ಷ ವಿಮಾದಾರರ 13 ಲಕ್ಷ ವಿಮಾ ಪಾಲಿಸಿಗಳ ಡಾಟಾ ಎಂಟ್ರಿ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಎರಡನೇ ಹಂತದಲ್ಲಿ 1990-91ರಿಂದ ಇಲ್ಲಿಯವರೆಗಿನ ವಿಮಾದಾರರ ಪ್ರೀಮಿಯಂ ಮತ್ತು ಸಾಲದ ಕಂತುಗಳ ಡಾಟಾ ಎಂಟ್ರಿ ಕಾರ್ಯವು ಪ್ರಗತಿಯಲ್ಲಿದೆ. ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಸರ್ಕಾರವು ಒಬ್ಬ ಐಟಿ ಸಮಾಲೋಚಕರನ್ನು ನೇಮಿಸಿದೆ. ವಿಮಾ ಇಲಾಖೆಯ ಸಮಗ್ರ ಗಣಕೀಕರಣ ಯೋಜನೆಯನ್ನು ಖಜಾನೆ-2 ಹಾಗೂ ಹೆಚ್.ಆರ್.ಎಂ.ಎಸ್ ತಂತ್ರಾಂಶಗಳೊಂದಿಗೆ ಸಮೀಕರಣಗೊಳಿಸಲು ಯೋಜಿಸಲಾಗಿದ್ದು, ಅದರಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಎಲ್ಲಾ ಪ್ರಕ್ರಿಯೆಗಳ ಮೇಲುಸ್ತುವಾರಿಯನ್ನು ಆಯುಕ್ತರು, ಖಜಾನೆ ಇಲಾಖೆ, ಅವರಿಗೆ ವಹಿಸಲಾಗಿದೆ.

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ಸಂಪೂರ್ಣವಾಗಿ ಗಣಕೀಕರಣಗೊಂಡ ನಂತರದಲ್ಲಿ ಸರ್ಕಾರಿ ನೌಕರರು ತಮ್ಮ ಖಾತೆಯಲ್ಲಿ ಆಗುವ ವಹಿವಾಟುಗಳ ಮಾಹಿತಿಯನ್ನು ಸಂಪರ್ಕ ಜಾಲದಲ್ಲಿ ಪಡೆಯಬಹುದು.

**ಆಇ 12 ಕವಿಇ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ